**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ ಉತ್ತರ ಕನ್ನಡ : ಕಾರವಾರ**

**ಸ್ಪೆಷಲ್ ಕೇಸ್ ನಂ. 7/2015**

**ದೋ.ಸಾ. : 5 ಫ್ರಾ.ಸಾ. : 6**

ಸಾಕ್ಷಿಯ ಹೆಸರು : ಸದಾನಂದ

ತಂದೆಯ ಹೆಸರು : ಪುಂಡಲೀಕ ಪೈ

ವಯಸ್ಸು : 73 ವರ್ಷ

ಉದ್ಯೋಗ : ನಿವೃತ್ತ ಜೀವನ

ವಾಸ : ಹೆರವಟ್ಟಾ

**ದಿನಾಂಕಃ 03-11-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ**

1. ನಾನು ಕುಮಟಾದಲ್ಲಿ ಹೆರವಟ್ಟಾ ಶಾಲೆಯ ಹತ್ತಿರ ವಾಸ ಮಾಡುತ್ತೇನೆ. ನನ್ನ ಅಜ್ಜನ ಕಾಲದಿಂದ ನಾನು ಅದೇ ಮನೆಯಲ್ಲಿ ವಾಸ ಇದ್ದೇನೆ ಅದು ಸ್ವಂತ ಮನೆಯಾಗಿದೆ . ನ್ಯಾಯಾಲಯದ ಮುಂದೆ ಇರುವ ಆರೋಪಿ ಯಾರು ಎಂದು ನನಗೆ ಗುರುತಿಸಲು ಆಗುವುದಿಲ್ಲ. ನಾನು ಲೋಕಾಯುಕ್ತ ಪೊಲೀಸ್ ನವರಿಗೆ ಹೇಳಿಕೆ ಕೊಟ್ಟಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಮಾನ್ಯ ಅಭಿಯೋಜಕರು ಅನುಮತಿಯನ್ನು ಕೇಳುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಗಮನಿಸಿ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ವಿಶೇಷ ಸರಕಾರಿ ಅಭಿಯೋಜಕರಿಂದ**

2. ನಾನು ದಿನಾಂಕಃ23.09.2013 ರಂದು ಕರ್ನಾಟಕ ಲೋಕಾಯುಕ್ತ ಕಾರವಾರದ ಆರಕ್ಷಕ ಉಪಾಧೀಕ್ಷಕರ ಮುಂದೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನನ್ನ ಮನೆಯಲ್ಲಿ ದಿನಾಂಕ 16.09.2013 ರಂದು ಇದ್ದಾಗ ರಾತ್ರಿ 8.40 ಗಂಟೆಗೆ ಮನೆಯ ಹೊರಗೆ ದೊಡ್ಡ ಸದ್ದು ಕೇಳಿ ಹೊರಗೆ ಬಂದು ನೋಡಿದಾಗ ನನ್ನ ಕೇರಿಯ ಗಣೇಶ ನಾಯ್ಕ ಎಂಬುವರನ್ನು ಒಂದು ವಾಹನದಲ್ಲಿ ಬಂದವರು ಹಿಡಿದರು , ಆಗ ಏನಾಯಿತು ಎಂದು ತಾನು ಕೇಳಿದಾಗ ಸದರಿ ಗಣೇಶ ನಾಯ್ಕ ಫಿರ್ಯಾದಿಯಿಂದ ಲಂಚದ ಹಣ ಪಡೆದು ಮೋಟಾರ್ ಸೈಕಲ್ ಮೇಲೆ ಬಂದಿದ್ದರಿಂದ ಅವನನ್ನು ಹಿಂಬಾಲಿಸಿ ಬಂದಿರುವುದಾಗಿ ಅವರು ಲೋಕಾಯುಕ್ತ ಪೊಲೀಸ್

ನವರು ಎಂದು ನನಗೆ ತಿಳಿಸಿದರು ಎಂದರೆ ಸರಿಯಲ್ಲ. ಸದರಿ ಗಣೇಶ ನಾಯ್ಕ ನ್ಯಾಯಾಲಯದ ಮುಂದೆ ಇರುವ ಆರೋಪಿ ಎಂದರೆ ಗೊತ್ತಿಲ್ಲ. ಆರೋಪಿ ತನ್ನ ಕಿಸೆಯಿಂದ ಅಲ್ಲಿಯೇ ಪಕ್ಕದಲ್ಲಿರುವ ಕಂಪೌಂಡ್ ಒಳಗಡೆ ರೂ. 1,000/– ಎರಡು ನೋಟು , ರರೂ. 500/– ರ ಎರಡು ನೋಟು ಒಟ್ಟು ರೂ. 3,000/– ಬೀಸಾಡಿದ ಮತ್ತು ಅದನ್ನು ನನ್ನ ಸಮಕ್ಷಮ ಪರಿಶೀಲಿಸಿ ಲೋಕಾಯುಕ್ತ ಪೊಲೀಸ್ ನವರು ವಶಪಡಿಸಿಕೊಂಡರು ಆ ನೋಟುಗಳು ಅವರು ಹಿಂದೆ ಪ್ರಾಯೋಗಿಕ  ಪಂಚನಾಮೆಯಲ್ಲಿ ನಮೂದಿಸಿಕೊಂಡಿದ್ದರರು ಎಂದು ಹೇಳಿದ್ದ ನೋಟುಗಳಿಗೆ ತಾಳೆಯಾದವು ಎಂದರೆ ಸರಿಯಲ್ಲ. ನಾನು ಆ ಪ್ರಕಾರ ನಿ.ಪಿ. 41 ರಂತೆ ಹೇಳಿಕೆಯನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ನನ್ನ ಮನೆ ಇರುವ ಬೀದಿಯಲ್ಲಿಯೇ ವಾಸ ಇದ್ದಾನೆ ಎಂದರೆ ಸರಿಯಲ್ಲ. ನಾವು ಒಂದೇ ಊರಿನವರು ಆಗಿರುವುದರಿಂದ ಆರೋಪಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ  ಆರೋಪಿ ಪರ ವಕೀಲರಾದ ಶ್ರೀ ಎನ್ ವಿ ಎನ್ ರವರಿಂದ**

ಏನೂ ಇಲ್ಲ ಎಂದು ಹೇಳಿದ್ದಾರೆ.

**ಮರು ವಿಚಾರಣೆಃ – ಇಲ್ಲ –**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ